**CC 10005/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 10005/2024**

**ಸಿ ಡಬ್ಲೂ -5**
**ಪಿ ಡಬ್ಲೂ -4**

| | |
|---|---|
| **ಸಾಕ್ಷಿಯ ಹೆಸರು -** | **ರಾಘವೆಂದ್ರ** |
| **ತಂದೆಯ ಹೆಸರು -** | **ಪರಸಪ್ಪ** |
| **ವಯಸ್ಸು -** | **40 ವರ್ಷಗಳು** |
| **ಉದ್ಯೋಗ -** | **ಖಾಸಗಿ ಮೇಲ್ವಿಚಾರಕ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **10** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **10**(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ **1 ½** ವರ್ಷಗಳ ಹಿಂದೆ ಪೋಲಿಸರು ಕರೆದಾಗ ಆಕಾಶವಾಣಿ ಹತ್ತಿರ ಮಾಡಿದ್ದೆ. ನಿಪಿ **10** ರಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿಲ್ಲ. ಬಂಗಾರ ಜಪ್ತು ಆಗಿಲ್ಲ. ಆರೋಪಿಯನ್ನು ನೋಡಿರೆ ಗುರುತಿಸಲು ಆಗುವುದಿಲ್ಲ.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಈಗಾಗಲೇ ಅದನ್ನು ನಿಪಿಃ **11** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **11**(ಬಿ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 2 ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ಈಗಾಗಲೇ ನಿಪಿಃ 12 ಎಂದು ಗುರುತಿಸಲಾಗಿದೆ. ನಿಪಿಃ 12 ರ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 19-10-2024 ರಂದು ಸಂಜೆ 7.00 ಗಂಟೆಗೆ ಪೋಲಿಸರು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಮಗೆ ಠಾಣೆಯಲ್ಲಿ ತೋರಿಸಿದ್ದರೂ ಅಂದರೆ ಸರಿಯಲ್ಲ. ಸದರಿಯವರು ಚಾಸಾ -1 ರವರ ಮನೆಯಲ್ಲಿ ದಿಃ 20-09-2024 ರಂದು ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿ ಒಪ್ಪಿಕೊಂಡಿದ್ದರೂ ಅಂದರೆ ಸರಿಯಲ್ಲ. ನಂತರ ಕಳ್ಳತನ ಮಾಡಿ ಇಟ್ಟಿದ್ದ ಒಡವೆಗಳನ್ನು ತೋರಿಸುವುದಾಗಿ ಆರೋಪಿ ತನ್ನ ಮನೆಗೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಆರೋಪಿ ಒಡವೆಗಳನ್ನು ಹಾಜರುಪಡಿಸಿದ್ದರು ಅಂದರೆ ಸರಿಯಲ್ಲ. ಸಂಜೆ 7.00 ರಿಂದ 7.45 ಗಂಟೆಯ ವರಿಗೆ ಸದರಿ ಪಂಚನಾಮೆ ಆಗಿತ್ತು ಅಂದರೆ ಸರಿಯಲ್ಲ. ನಂತರ ಆರೋಪಿ ಚಾಸಾ -1 ರವರ ಮನೆಗೆ ಕರೆದುಕೊಡಂಡು ಹೋಗಿ ಕಳ್ಳತನ ಮಾಡಿದ ಸ್ಥಳ ತೋರಿಸಿದ್ದರು ಅಂದರೆ ಸರಿಯಲ್ಲ. ಆಗ ಸಂಜೆ 7.30 ರಿಂದ 8.45 ರವರೆಗೆ ಚಾಸಾ -1 ರವರ ಮನೆಯಲ್ಲಿ ಪಂಚನಾಮೆ ಆಗಿತ್ತು ಅಂದರೆ ಸರಿ. ನಿಪಿಃ 10 ಕ್ಕೆ ಆಗಲೇ ಸಹಿ ಮಾಡಿದ್ದೆ ಅಂದರೆ ಸರಿಯಲ್ಲ. ನಿಪಿಃ 11 ಮತ್ತು 12 ಸ್ಥಳದಲ್ಲಿ ತೆಗೆಯಲಾಗಿತ್ತು ಅಂದರೆ ಸರಿಯಲ್ಲ. ಆರೋಪಿಯನ್ನು ನೋಡಿ

ಗುರುತಿಸಲು ಸಾಧ್ಯವಿದ್ದರೂ ನನ್ನ ಸಮಕ್ಷಮ ಪಂಚನಾಮೆ ಆಗಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ ಇಲ್ಲಾ**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.